# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2760

ಸದಸ್ಯರ ಹೆಸರು : ಶ್ರೀ ಗಣಪತಿ ದುಮ್ಮಾ ಉಳ್ವೇಕರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ : 28.03.2022

ಉತ್ತರಿಸುವವರು : ಅರಣ್ಯ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಾರವಾರ ಜಿಲ್ಲೆ ಹೊನ್ನಾವರ ತಾಲ್ಲೂಕು ಕಾಸರಗೋಡು **"ಟೊಂಕ"** ತೀರ ಪ್ರದೇಶದಲ್ಲಿ ಅಳಿವಿನಂಚಿನಲ್ಲಿರುವ ಷೆಡ್ಯೂಲ್-1 ವರ್ಗದ ಕಡಲಾಮೆಗಳು ಮತ್ತು ಅಳಿವಿನಂಚಿನಲ್ಲಿರುವ ನದಿಯಲ್ಲಿರುವ ಮೃದು ಕವಚದ ಆಮೆಗಳ ಸಂರಕ್ಷಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು; | ಅರಣ್ಯ ಇಲಾಖೆಯಿಂದ ಕಡಲಾಮೆ ಮೊಟ್ಟೆ ಇಡುವ ಹಂಗಾಮಿನಲ್ಲಿ ಬೀಚ್ನಲ್ಲಿ ಸ್ಥಳದಲ್ಲಿಯೇ ಗಸ್ತು ತಿರುಗುವುದು, ಮೊಟ್ಟೆ ಇಟ್ಟ ಗುರುತುಗಳು ಕಂಡು ಬಂದ ತಕ್ಷಣ, ಗೂಡುಗಳ ಸುತ್ತಲೂ ರಕ್ಷಾ ಕವಚ ನಿರ್ಮಿಸಿ ರಕ್ಷಣೆ ನೀಡಲಾಗುತ್ತಿದೆ. ಮೊಟ್ಟೆ ಇಟ್ಟ ದಿನದಿಂದ ಮರಿಯಾಗಿ ಕಡಲು ಸೇರುವವರೆಗೆ ಪ್ರತಿ ದಿನ ವೀಕ್ಷಣೆ ಮಾಡಿ ರಕ್ಷಣೆ ನೀಡಿ (*In-situ* Conservation) ಸಮುದ್ರಕ್ಕೆ ಬಿಡಲಾಗುತ್ತದೆ.<br><br>ಅರಣ್ಯ ಇಲಾಖೆಗೆ ಮೀನುಗಾರರು ಮೊಟ್ಟೆಗಳನ್ನು ಗುರುತಿಸಿ, ಸಂಗ್ರಹಿಸಿ ಮಾಹಿತಿ ನೀಡಿ ಒಪ್ಪಿಸಿದ ಮೊಟ್ಟೆಗಳನ್ನು ಇಲಾಖಾ ವತಿಯಿಂದ ನಿರ್ಮಿಸಲಾದ ರಕ್ಷಣಾ ಗೂಡುಗಳಲ್ಲಿಟ್ಟು ಮರಿಯಾಗುವವರಗೆ ಸಂರಕ್ಷಣೆ ಮಾಡಲಾಗುವುದು (*Ex-situ* Conservation) ಹಾಗೂ ಮಾಹಿತಿ ನೀಡಿ ಸಂರಕ್ಷಣೆಗೆ ಸಹಕರಿಸಿದ ಮೀನುಗಾರರಿಗೆ ಗೌರವಧನ ನೀಡಲಾಗುತ್ತದೆ. |
| ಆ) | ಕಡಲ ತೀರ ನಿರ್ವಹಣಾ ನಕ್ಷೆಗಳಲ್ಲಿ ಸದರಿ ತೀರವನ್ನು ಕಡಲಾಮೆ ಆವಾಸ ಸ್ಥಾನಗಳೆಂದು ಗುರುತಿಸದಿರಲು ಕಾರಣಗಳೇನು; | ಸದರಿ ಪ್ರದೇಶವು ಕರ್ನಾಟಕ ರಾಜ್ಯ ಕಡಲತೀರ ನಿರ್ವಹಣಾ ಪ್ರಾಧಿಕಾರ, ಬೆಂಗಳೂರು ರವರ ವ್ಯಾಪ್ತಿಗೆ ಒಳಪಡುತ್ತದೆ. ಆಮೆಗಳು ಮೊಟ್ಟೆ ಇಡುವ ಜಾಗ ಅಭಿವೃದ್ಧಿ ರಹಿತ ಪ್ರದೇಶ (No Development Zone) ಕ್ಕೆ ಸೇರಿರುವುದರಿಂದ ಅದನ್ನು ಕಡಲ ತೀರ ನಿರ್ವಹಣಾ ನಕ್ಷೆಗಳಲ್ಲಿ ಪ್ರತ್ಯೇಕವಾಗಿ ಗುರುತಿಸುವ ಅವಶ್ಯಕತೆ ಇರುವುದಿಲ್ಲ. |
| ಇ) | ಕಡಲಾಮೆಯು ಮೊಟ್ಟೆ ಇಡುವ ಮರಳು ತೀರಗಳ ಮೇಲೆ ಹಾಗೂ ಬ್ಲೂ ಫ್ಲಾಗ್ ಪ್ರಮಾಣ ಪತ್ರ ಪಡೆದ ಪ್ರತಿಷ್ಠಿತ ಕಾಸರಗೋಡು ಕಡಲ ತೀರದ ಮರಳಿನ ಮೇಲೆ ಕೆಂಪು ಮಣ್ಣು ಸುರಿದು ಆಮೆಗಳ ಸಂತತಿ ನಾಶ ಪಡಿಸಲು ಹೊರಟಿರುವವರ ಮೇಲೆ ಕೈಗೊಂಡ ಕ್ರಮಗಳೇನು; ಈ ಪ್ರದೇಶದ ಸಂರಕ್ಷಣೆಗೆ ಸರ್ಕಾರದ ಕ್ರಮಗಳೇನು; | ಬಂದರು ಮತ್ತು ಒಳಸಾರಿಗೆ ಇಲಾಖೆ ಕಡಲು ಕೊರೆತ ತಡೆಗಟ್ಟುವ ಕಾಮಗಾರಿ ಕೈಗೊಳ್ಳಲು ಈಗ ಹಾಲಿ ಇರುವ ರಸ್ತೆಯನ್ನು ಮಣ್ಣು ಹಾಕಿ ಸರಕು ಸಾಗಾಣೆ ಯೋಗ್ಯ ಮಾಡಿಕೊಂಡಿದ್ದಾರೆ. ಇದರಿಂದ ಆಮೆಗಳ ಮೊಟ್ಟೆ ಇಡುವ ಸ್ಥಾನಗಳಿಗೆ ಧಕ್ಕೆ ಆಗಿರುವುದಿಲ್ಲ. |

ಸಂಖ್ಯೆ: ಅಪಜೀ 78 ಎಫ್‌ಡಬ್ಲ್ಯೂಎಲ್ 2022

(ಉಮೇಶ್ ವಿ. ಕತ್ತಿ)
ಅರಣ್ಯ, ಆಹಾರ, ನಾಗರಿಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು